ಮೈಸೂರ ಗೆಜೆಟ್.

ನಂ. 38. ಸರ್ಕಾರದಿಂದ ಪ್ರಕಾಶವಾದ್ದು.

ಬೆಂಗಳೂರು, ಶನಿವಾರ, ಸೆಪ್ಟಂಬರ ತಾ॥ 19, ಸನ್ 1885.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟದ ಸಂಖ್ಯೆ ಕೊಡಲ್ಪಡುತ್ತೆ.

೧ನೇ ಭಾಗ.

ಸರ್ಕಾರೀ ಕಾಗದ ಪತ್ರಗಳು.

COLONIAL AND INDIAN EXIHIBITION 1886.

ಕೊಲೋನಿಯಲ್ ವ ಇಂಡಿಯನ್ ಎಕ್ಸಿಬಿಷನ್.

(ಅಂದರೆ ಬ್ರಿಟಿಷ ಸಾಮ್ರಾಜ್ಯಕ್ಕೆ ಹೊಂದಿರುವ ಊರುಗಳಲ್ಲಿ ವ ಹಿಂದೂದೇಶದಲ್ಲಿ ಉತ್ಪತ್ತಿ ಆಗುವ ಒಡವೆಗಳ ಕುರಿತು 1886ನೇ ಇಸವಿಯಲ್ಲಿ ನಡೆಯುವ ಪರೀಕ್ಷಾ ಪ್ರದರ್ಶನ.

ಶ್ರೀ ಮಹಾರಾಣಿ ಚಕ್ರವರ್ತಿನಿಯವರ ಆಜ್ಞಾನುಗುಣವಾಗಿ ಹಿಂದೂದೇಶದ ಮತ್ತು ಬ್ರಿಟಿಷ ಕೊಲೋನಿಗಳ (ಆರ್ಜಿತ ಸಂಸ್ಥಾನಗಳ) ಕಲಾಕೌಶಲಗಳ, ಕೈಗಾರಿಕೇ ಕೆಲಸಗಳ, ವ ಉತ್ಪತ್ತಿಗಳ ಒಂದು ಪರೀಕ್ಷಾ ಪ್ರದರ್ಶನವು ಬರುವ ವರುಷ ಲಂಡನ್ ಪಟ್ಟಣದಲ್ಲಿ ನಡೆಯುವದಾಗಿಯೂ, ಅದಕ್ಕೆ ವರ್ತಕರೂ, ಕೈಗಾರಿಕೇ ಕೆಲಸದವರು, ವ ಮಹಾಜನಗಳು ಕೂಡ ಯೋಗ್ಯಪದಾರ್ಥಗಳನ್ನು ಕಳುಹಿಸಬೇಕೆಂತ ಈ ಮೊದಲೇ ಪ್ರಕಟಿಸೋಣಾಗಿದೆಯಷ್ಟೇ.

ಹಿಂದೂ ದೇಶದಿಂದ ಕಳುಹಿಸಲ್ಪಡುವ ವಸ್ತುಗಳು ನಾಲ್ಕು ಭಾಗಗಳಲ್ಲಿ ತೋರಿಸಲ್ಪಡೋಣಾದೀತೆಂತ ಎಲ್ಲಾಜನರ ತಿಳುವಳಿಕೇ ಬಗ್ಗೆ ಪ್ರಕೃತ ಹೇಳೋಣಾಗಿದೆ, ಅವು ಯಾವವೆಂದರೆ:—

(1.) ಇಂಡಿಯಾ ಗವರ್ನಮೇಂಟಿನವರು ಯಾ ಅವರ ಪರಿಮುಖವಾಗಿ ಕಳುಹಿಸುವ ಪ್ರದರ್ಶಕ ವಸ್ತುಗಳ ಬಗ್ಗೆ ಅಂಕಣ. ಇವುಗಳಲ್ಲಿ ಆಹಾರ ವ ಪಾನದ ಪದಾರ್ಥಗಳು, ಕಾಫೀ ಬೀಜ, ಅಫೀಮು, ತೈಲ್ಯಗಳು ವ ತೈಲ್ಯ ಹುಟ್ಟುವ ಬೀಜಗಳು, ಔಷಧಗಳು, ಗೋಂದುಗಳು, ಬಣ್ಣಗಳು, ರಂಗುಗಳು, ನಾರು, ಖನಿಜ (ಲೋಹ, ಕಲ್ಲಿದ್ದಲು, ಮುಂತಾದ ಪದಾರ್ಥಗಳು) ವಿವಿಧಜಾತಿಯ ಮರಗಳೂ, ತೊಗಲು, ಕೊಂಬು, ಬೆತ್ತ, ಹುಲ್ಲು, ಬಿದರು ಮುಂತಾದವುಗಳಿಂದ ಮಾಡಿದ ದೊರಗುತರದ ಪದಾರ್ಥಗಳೂ, ಮತ್ತು ಹತ್ತಿ, ರೇಶ್ಮೆ, ನಾರು ಮುಂತಾದವುಗಳಿಂದ ಮಾಡಿದ ದೊರಗು ವಸ್ತ್ರಗಳು ವ ಕೈಗಾರಿಕೇ ಕೆಲಸಗಳು ಮುಂತಾದ ಹಿಂದೂದೇಶದ ಎಲ್ಲಾ ಕಡೆಯಿಂದ ಹೋಗುವಂಥಾ ನಾನಾತರದ ಸಾದಾ (ಸ್ವಾಭಾವಿಕಸ್ಥಿತಿಯಲ್ಲಿರುವ) ಉತ್ಪತ್ತಿ ಮತ್ತು ದೊರಗು ಕೈಗಾರಿಕೇ ಕೆಲಸಗಳು ಸಹ ಇದರಲ್ಲಿ ಇಡೋಣಾಗುವವು.

(2.) ಪ್ರಾವಿನ್ಶ್ಯಾಲ್ (ಆಯಾಯ ಸ್ಥಳಿಕ) ಗವರ್ನಮೆಂಟಿನವರು ವ ಪೊಲಿಟಿಕಲ್ (ರಾಜಕೀಯ) ಆಫೀಸರುಗಳು, ಯಾ ಅವರ ಪರಿಮುಖವಾಗಿ, ಕಳುಹಿಸುವ ಪ್ರದರ್ಶಕ ವಸ್ತುಗಳ ಬಗ್ಗೆ ಅಂಕಣ. ಇವುಗಳಲ್ಲಿ ಒಂದೊಂದು ಪ್ರದೇಶದಲ್ಲಿ ಯಾ

ನೇಟಿವ (ದೇಶೀಯ) ಸಂಸ್ಥಾನದಲ್ಲಿ ಮಾತ್ರವೇ ವಿಶೇಷವಾಗಿ ಉಂಟಾಗುವ ಚಿತ್ರಗಳೂ, ನಕ್ಷೆಗಳೂ, ದೇವಾಲಯಗಳ ವ ಕಟ್ಟೋಣಗಳ ಆಕೃತಿಗಳೂ, ಮರದಲ್ಲಿ ಯಾ ಕಲ್ಲಿನಲ್ಲಿ ಕಡೆದ ಕೆತ್ತಿಗೆಗಳ ಮಾದರಿಗಳೂ, ಮನೆ ಉಪಯೋಗದ ಅಲಂಕಾರಿಕ ವಸ್ತುಗಳೂ, ಗಾಯನಿಕ ವಾದ್ಯ ಸಾಮಗ್ರಿಗಳು, ಆಭರಣಗಳೂ, ಲೋಹದಿಂದ, ಮರದಿಂದ, ದಂತದಿಂದ ಯಾ ಕಲ್ಲಿನಿಂದ ಮಾಡಿದಂಥಾ ಸಮಸ್ತ ತರದ ಶೃಂಗಾರಿಕ ವಸ್ತುಗಳೂ, ಮಣ್ಣಿನ ಪಾತ್ರಗಳೂ, ಗಾಜು, ನಾನಾತರದ ವಿಚಿತ್ರವಾದ ಉಡಿಗೇ ವಸ್ತ್ರಗಳೂ, ವ ಸಾದಾವಸ್ತ್ರಗಳು, ಜಮಖಾನು, ರತ್ನಕಂಬಳಿಗಳೂ, ಚಿತ್ರಿತ ವಸ್ತ್ರಗಳೂ, ಉಂಡೆಗಳೂ, ತೊಗಲು, ಬಿದರು, ಹುಲ್ಲು, ಇತ್ಯಾದಿಗಳಿಂದ ಮಾಡಿದ ನಾಜೂಕು ತರದ ಕೈಗಾರಿಕೆ ಕೆಲಸಗಳು ಮುಂತಾದ ಕಲಾ ಕೌಶಲಗಳ ವ ಕಾರೇಗಾರಿಕೆಯ ಮಾದರಿಗಳು ಇದರಲ್ಲಿ ಇಡೋಣಾಗಬೇಕಾಗಿ ಯೋಚಿಸೋಣಾಗಿ ಅದೆ. ಈ ಅಂಕಣದಲ್ಲಿ ಪ್ರದರ್ಶಿಸಲ್ಪಡುವ ವಸ್ತುಗಳು ಪ್ರದರ್ಶನ ಮುಗಿಯುತ್ತಲೇ ಮಾರಲ್ಪಡಬಹುದು.

(3.) ಖಾಸಗೀ ಜನರು ನೆಟ್ಟಗೆ ಕಳುಹಿಸುವ ಪದಾರ್ಥಗಳ ಬಗ್ಯೆ ಅಂಕಣ. (2) ನೇ ರಖಮಿನಲ್ಲಿ ಹೇಳಿರುವ ತರದ ನಾಜೂಕಲ್ಲದ ಕೈಗಾರಿಕೇ ಕೆಲಸಗಳನ್ನು ಇಡುವ ಬಗ್ಯೆ ಈ ಅಂಕಣ ಉಪಯೋಗಿಸುವರೆ ಉದ್ದೇಶಿಸೋಣಾಗಲಿಲ್ಲಾ. ಈ ಅಂಕಣದಲ್ಲಿ ಪ್ರದರ್ಶಿಸಲ್ಪಡುವ ವಸ್ತುಗಳು ಪ್ರದರ್ಶನ ಮುಗಿಯುತ್ತಲೇ ಮಾರಲ್ಪಡಬಹುದು.

(4.) ಚಾ ಮುಂತಾದ್ದರ ಕೋಠಡಿ. ಇದರಲ್ಲಿ ಚಾಸೊಪ್ಪು, ಕಾಫೀ ಬೀಜ, ಮತ್ತು ಕೊಕ್ಕೋ (Cocoa) ಇವುಗಳ ಮಾದರಿಗಳು ತೋರಿಸಲ್ಪಟ್ಟು, ಚಾ ವಗೈರೆ ಮಾರಲ್ಪಡುವದು.

(5.) ತಂಬಾಕು ಯಾನೆ ಹೊಗೆ ಸೊಪ್ಪಿನ ಕೋಠಡಿ. ಇದರಲ್ಲಿ ಚುರುಟು ವ ತಂಬಾಕು ಪ್ರದರ್ಶಿಸಲ್ಪಟ್ಟು ಮಾರಲ್ಪಡುವದು.

(6.) ಪ್ರದರ್ಶನದ ಕಾಲದಲ್ಲಿ, ಸಾಮಾನು ಮಾರುವ ಬಗ್ಯೆ ಅಂಗಡಿಗಳನ್ನು ಇಡುವ ಬಗ್ಯೆ ಪ್ರತ್ಯೇಕ ಅಂಕಣ.

ಪ್ರದರ್ಶಿಸುವರೆ ಅಪೇಕ್ಷಿಸುವ ಖಾಸಗಿ ಜನರು ತಮ್ಮತಮ್ಮ ವಸ್ತುಗಳನ್ನು (1) ನೇ (2) ನೇ ಎಂಬುದಾಗಿ ಮೇಲೆ ಹೇಳಿದ ಅಂಕಣಗಳಿಗಾಗಲಿ, ಖಾಸಗೀ ಪ್ರದರ್ಶಕರ ಬಗ್ಯೆಂತ ಇರುವ (3)ನೇ ಅಂಕಣಕ್ಕಾಗಲೀ ಕಳುಹಿಸುವದು ಅವರವರ ಮುನಾಸಬು ಆಗಿರುತ್ತದೆ.

ಪ್ರದರ್ಶಕ ವಸ್ತುಗಳನ್ನು (1) ನೇ ಅಂಕಣಕ್ಕೆ ಕಳುಹಿಸುವರೆ ಅಪೇಕ್ಷಿಸುವವರು, ಕಲ್ಕತ್ತೆಯ ರೆವಿನ್ಯೂ ವ ವ್ಯವಸಾಯ ಆಫೀಸಿನ ಪೈಕೀ ಪ್ರದರ್ಶಕ ಇಲಾಖೆಯ ಜಿಮ್ಮೆಯುಳ್ಳ ಬಾಬೂ ತ್ರೈಲೋಕ್ಯನಾಥ ಮುಕರ್ಜೀ ಯವರಿಗೆ ದೇರೀಖ್ವಾ ಮಸಿವಿ ಮಾಡಿಕೊಳ್ಳತಕ್ಕದ್ದು. (2) ನೇ ಅಂಕಣಕ್ಕೆ ಕಳುಹಿಸುವರೆ ಅಪೇಕ್ಷಿಸುವವರು ತಾವು ವಾಸವಾಗಿರುವ ದೇಶದಲ್ಲಿ ಯಾ ಸಂಸ್ಥಾನದಲ್ಲಿ ಪ್ರದರ್ಶನ ಕೆಲಸದ ಜಿಮ್ಮೆಯುಳ್ಳ ಆಫೀಸರರಿಗೆ ಬರೆಕೊಳ್ಳತಕ್ಕದ್ದು.

ಜಾಗದ ಬಗ್ಯೆ ಕೊಡುವ ಅರ್ಜಿಗಳೆಲ್ಲಾ ಈ ಕೆಳಗೆ ನಮೂದು ಇರುವ ನಮೂನೆಗೆ ಸರಿಯಾಗಿರತಕ್ಕದ್ದು.

ಪ್ರದರ್ಶನಕ್ಕೆ ಸಂಬಂಧಿಸಿದ ಕೆಲಸ ನೋಡುವ ಬೇರೆಬೇರೆ ಆಫೀಸರುಗಳ ಒಂದು ಪಟ್ಟಿ ಇದರೊಂದಿಗೆ ಅದೆ.

ಖು ನಾಕಪಡೆ

ಖಾಸಗೀ ಪ್ರದರ್ಶಕರ ಬಗ್ಯೆ ಇರುವ (3)ನೇ ಅಂಕಣಕ್ಕೆ ಆಗಲೀ, (4)ನೇ (5)ನೇ ವ (6)ನೇ ಅಂಕಣಗಳಿಗಾಗಲೀ ಪ್ರದರ್ಶಕ ವಸ್ತುಗಳನ್ನು ಕಳುಹಿಸುವರೆ ಅಪೇಕ್ಷಿಸುವಂಥಾವರು ಲಂಡನ್ ಪಟ್ಟಣದ ಮೆ॥ ಎಚ್. ಎಸ್. ಕಿಂಗ್ ಎಂಡ್ ಕೋ ಇವರಿಗಾಗಲೀ, ಕಲ್ಕತ್ತೆಯ ಮೆ॥ ಕಿಂಗ್ ಹೆಮಿಲ್ಟನ್ ಎಂಡ್ ಕೋ ಇವರಿಗಾಗಲೀ, ಅಥವಾ ಬೊಂಬೈಯ ಮೆ॥ ಕಿಂಗ್. ಕಿಂಗ್ ಎಂಡ್ ಕೋ ಇವರಿಗಾಗಲೀ ಬರದುಕೊಳ್ಳತಕ್ಕದ್ದು.

ನಂಬರ (1)ನೇ ಅಂಕಣಕ್ಕೆ ಕಳುಹಿಸುವ ಪದಾರ್ಥಗಳನ್ನು ನಾಜೂಕಾದ ಸಣ್ಣ ಪೆಟ್ಟಿಗೆಗಳಲ್ಲಿ ಸರಿಯಾಗಿ ಇಡಬೇಕು. ನಂಬರ (2) ನೇ ಅಂಕಣದಲ್ಲಿ ಪ್ರದರ್ಶಕ ವಸ್ತುಗಳ ಬಗ್ಯೆ ಪ್ರತ್ಯೇಕಿಸಿಟ್ಟ ಸ್ಥಳವು 12 ಅಡಿ (ಫೀಟ್) ಮಾತ್ರ ಅಗಲವಿರುವದರಿಂದ ದೊಡ್ಡ ಪದಾರ್ಥ ಇಡುವದಕ್ಕೆ ಸ್ಥಳ ಸಾಕಾಗಲಿಕ್ಕಿಲ್ಲ. ಜಮಖಾನುಗಳು 12 ಅಡಿ ಉದ್ದ 9 ಅಡಿ ಅಗಲಕ್ಕಿಂತ ಜಾಸ್ತೀ ಆಗಿರಕೂಡದು. ಮರದ ವ ಕಲ್ಲಿನ ಚಿತ್ರಿತ ಸಾಮಾನುಗಳು 1 ಅಡಿ 8 ಇಂಚು ಚಚ್ಚೌಕ ಅಳತೆಗಿಂತ ಜಾಸ್ತಿ ಇರಕೂಡದು.

ಜಾಗದ ಬಗ್ಯೆ ಬಾಡಿಗೆ ತಕ್ಕೊಳ್ಳೋಣಾಗಲಿಕ್ಕಿಲ್ಲ.

ಪ್ರದರ್ಶಕ ವಸ್ತುಗಳನ್ನು ಬರುವ ಡಿಸೆಂಬರ ಆಖೈರ ಒಳಗಾಗಿ ಕಳುಹಿಸ ಬೇಕಾಗಿರುತ್ತದೆ.

ಕಲ್ಕತ್ತೆಯಿಂದಾಗಲೀ ಪ್ರೊವಿನ್ಶ್ಯಾಲ್ ಹೆಡ್‌ಕ್ವಾರ್ಟರ (ಸಂಸ್ಥಾನಗಳ ಮುಖ್ಯಪಟ್ಟಣ) ಗಳಿಂದಾಗಲೀ (1) ನೇ ವ (2) ನೇ ಅಂಕಣಗಳಲ್ಲಿ ಪ್ರದರ್ಶಿಸಲ್ಪಡುವ ಬಗ್ಯೆ ಲಂಡನ್ ಪಟ್ಟಣಕ್ಕೆ ಕಳುಹಿಸಲ್ಪಡುವ ವಸ್ತುಗಳ ಜಹಜು ಬಾಡಿಗೆಯನ್ನು ಇಂಡ್ಯಾ ಗವರ್ನಮೆಂಟಿನವರು ಕೊಡುವರು. ಈ ಅಂಕಣಗಳಲ್ಲಿ ಜಾಗ ಕಡಿಮೆಯಿರುವದರಿಂದ ಸದರೀ ಅಂಕಣಗಳ ಜಿಮ್ಮೆಯುಳ್ಳ ಆಫೀಸರರು ತಮ್ಮ ಅಂಕಣಗಳಲ್ಲಿ ತೋರಿಸುವರೆ ತಮಗೆ ಖುಶಿ ಇಲ್ಲದ ಯಾವ ವಸ್ತುಗಳನ್ನಾದರೂ ಅಂಗೀಕರಿಸುವರೆ ನಿರಾಕರಿಸಬಹುದು. ತಮ್ಮ ಅಂಕಣಗಳ

ಲ್ಲಿಡಕೊಡದೆಂತ ಅವುಗಳ ಜಿಮ್ಮೆಯನ್ನುಳ್ಳ ಆಫೀಸರರು ಹೇಳಿದ್ದಲ್ಲಿ ಅವುಗಳ ಮಾಲೀಕನು ಜಾಗದ ಬಗ್ಯೆ ಲಂಡನ್ ಪಟ್ಟಣದ ಮೆ|| ಎಚ್. ಎಸ್. ಕಿಂಗ್ ಎಂಡ್ ಕೋ ಇವರಿಗಾಗಲೀ, ಕಲ್ಕತ್ತೆಯ ಮೆ|| ಕಿಂಗ್ ಹೆಮಿಲ್ಟನ್ ಎಂಡ್ ಕೋ ಇವರಿಗಾಗಲೀ, ಅಥವಾ ಬೊಂಬಾಯಿಯ ಮೆ|| ಕಿಂಗ್, ಕಿಂಗ್ ಎಂಡ್ ಕೋ ಇವರಿಗೆ ಆಗಲೀ ಬರಕೊಳ್ಳಬಹುದು.

ಹೆಚ್ಚಿಗೆ ತಪಸೀಲ್ ಬೇಕಾದರೆ ಇದರೊಂದಿಗೆ ಯಿರುವ ಪಟ್ಟಿಯಲ್ಲಿ ಹೆಸರು ಹೇಳಿದ ಆಫೀಸರುಗಳಿಗೆ ಆಗಲಿ, ಕಲ್ಕತ್ತೆಯ ರೇವಿನ್ಯೂ ವ ವ್ಯವಸಾಯ ಆಫೀಸಿನ ಪ್ರದರ್ಶನ ಇಲಾಖೆಗೆ ಆಗಲೀ ಅಥವಾ ಮೇಲೆ ಹೇಳಿದ ಮೆ|| ಕಿಂಗ್ ವಗೈರೆಗೆ ಮನವಿ ಮಾಡಿಕೊಳ್ಳಬೇಕು.

ಈ. ಸಿ. ಬಕ್,
ಇಂಡ್ಯಾ ಗವರ್ನಮೆಂಟ್ ಸಿಕ್ರೇಟರಿ.

ಕೊಲೋನಿಯಲ್ ಎಂಬ ಆರ್ಜಿತ ಸಂಸ್ಥಾನಗಳ ಮತ್ತು ಹಿಂದು ದೇಶದ ಬಾಬತು 1886ನೇ ಇಸವಿಯಲ್ಲಿ ಲಂಡನ್ ಪಟ್ಟಣದಲ್ಲಿ ನಡೆಯುವ ಪ್ರದರ್ಶನ.

ಜಾಗದ ಬಗ್ಯೆ ಅರ್ಜಿ.

* ಇಂಪೀರಿಯಲ್ ಅಂದರೆ ಮಹಾರಾಜಿಕವೋ, ಯಾ ಪ್ರೊವಿನ್ಶ್ಯಾಲ್ ಅಂದರೆ ಸ್ಥಳಿಕವೋ ಯೆಂಬದು ಸಂಗತ್ಯಾನುಸಾರವಾಗಿ ಇಲ್ಲಿ ನಮೂದಿಸಬೇಕು.

* ಕೊಲೋನಿಯಲ್ ವ ಇಂಡಿಯನ್ ಪ್ರದರ್ಶನದ ಅಂಕಣದಲ್ಲಿ ಈ ಕೆಳಗೆ ವಿವರಿಸಿದ ಜಾಗದ ಬಗ್ಯೆ ಇದರ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

ನೆಲದ ಮೇಲೆ ______ ಅಡಿ ಉದ್ದ ______ ಅಡಿ ಅಗಲ.
ಗೋಡೆ ಮೇಲೆ ______ ಅಡಿ ಉದ್ದ ______ ಅಡಿ ಅಗಲ.
______ ಅಡಿ ಉದ್ದ ______ ಅಡಿ ಅಗಲ.

ಪ್ರದರ್ಶಕರ ಪೂರ್ಣ ಹೆಸರು ವ ಮೇಲ್ವಿಳಾಸ ______

ಪ್ರದರ್ಶಿಸಲ್ಪಡುವ ವಸ್ತುವಿನ ಸ್ವಭಾವ ______

ತಾಜಾಕಲಂ.—ಪ್ರದರ್ಶಿಸುವವನ ಹೆಸರಿನ ವ ಪ್ರದರ್ಶಿಸಲ್ಪಡುವ ವಸ್ತುವಿನ ಸ್ವಭಾವದ ಕುರಿತ ವಿಷಯವು ಕೂಡುವಷ್ಟರ ಮಟ್ಟಿಗೆ ತಪ್ಪಿಲ್ಲದ್ದಾಗಿಯೂ ವಿವರವಾಗಿಯೂ ಇರತಕ್ಕದ್ದು. ಇದು ಪಟ್ಟಿಯ ಯಥಾರ್ಥತೆಯನ್ನು ವ ಪ್ರಯೋಜನವನ್ನು ನಿಶ್ಚಿತ ಮಾಡುವ ಬಗ್ಯೆ ಆಗಿರುತ್ತದೆ.

ಅರ್ಜಿದಾರನ ದಸ್ತಖತು ______

ಮೇಲ್ವಿಳಾಸ ______

ಅರ್ಜಿ ತಾರೀಖು ______

ಎಗ್ಜಿಬಿಷನ್ ಆಫೀಸರರ ಪಟ್ಟಿ.

ಮದರಾಸಿನ, ಲಂಡನ್ ಎಗ್ಜಿಬಿಷನ್ ಕಮ್ಮಿಟಿಯ ಸೆಕ್ರೇಟರಿ.
ಬೊಂಬೈ, ಲಂಡನ್ ಎಗ್ಜಿಬಿಷನ್ ಕಮ್ಮಿಟಿಯ ಸೆಕ್ರೇಟರಿ.
ಬಂಗಾಲ್, ಲಂಡನ್ ಎಗ್ಜಿಬಿಷನ್ ಕಮ್ಮಿಟಿಯ ಸೆಕ್ರೇಟರಿ.
ಡಿ. ಎಂ. ಸ್ಮಿತ್ ದೊರೆಗಳು ಸಿ. ಸ. ನಾರ್ತ್‌ವೆಸ್ಟರ್ನ್ ಪ್ರಾವಿನ್ಸಸ್‌ಗಳ ವ ಅಯೋಧ್ಯೆಯ ವ್ಯವಸಾಯ ಇಲಾಖೆಯ ಡೈರೆಕ್ಟರ್ ಕಾನ್ಪುರದಲ್ಲಿರುವವರು.

ಲಾಹೋರ್ ಮೇಯೋಸ್ಕೂಲ್ ಆಫ್ ಆರ್ಟ್ಸ್ ಇವರ ಪ್ರಿನ್ಸಿಪಾಲ್ ಜೆ. ಎಲ್. ಕಿಫ್'ಲಿಂಗ್ ಧೊರೆಗಳು.

ನಾಗಪೂರದಲ್ಲಿರುವ ಸೆಂಟ್ರಲ್ ಪ್ರಾವಿನ್ಸ್ (ಮಧ್ಯದೇಶಗಳು) ಗಳ ವ್ಯವಸಾಯ ಇಲಾಖೆಯ ಡೈರೆಕ್ಟರಾಗಿರುವ ಜೆ. ಬಿ. ಫುಲ್ಲರ್ ಧೊರೆಗಳು, ಬಿ. ಸಿ. ಸ.

ಎಫ್. ಎಲ್. ಬೆಲ್ಲಿ ಧೊರೆಗಳು, ರಂಗೂನ್.

ಎಚ್, ಜಡ. ಡರಹಾರ್ ಧೊರೆಗಳು ಬಿ. ಸಿ. ಸ. ಅಸ್ಸಾಂ ವ್ಯವಸಾಯ ಇಲಾಖೆಯ ಡೈರೆಕ್ಟರ್, ಸಿಲ್ಲೊಂಗ್.

ರಜಪುತ್ತಾನಾ.

ರಾಜಪುತ್ತಾನದಲ್ಲಿರುವ ಗವರ್ನರ ಜನರಲ್‌ರವರ ಏಜಂಟ್.
ಆರ್. ಎಸ್. ವ್ಹೈಟವೆ ಧೊರೆಗಳು ಸೆಟ್ಲ್‌ಮೆಂಟ್ ಆಫೀಸರು, ಅಜಮೀರ ವ ಮೇರವಾರ.
ಪೂರ್ವರಾಜಪುತ್ತಾನ ಸಂಸ್ಥಾನಗಳ ರೆಸಿಡೆಂಟರು.
ಜಯಪುರ ಮ್ಯೂಜಿಯಮಿನ ಆನರೇರಿ ಸೆಕ್ರೆಟೇರಿ.
ಪಶ್ಚಿಮ ರಾಜಪುತ್ತಾನ ಸಂಸ್ಥಾನಗಳ ರೆಸಿಡೆಂಟರು.
ಅಲ್ವಾರ ಪೊಲಿಟಿಕಲ್ ಏಜಂಟರು.
ಕೋಟಾದ ಪೊಲಿಟಿಕಲ್ ಏಜಂಟರು.
ಬಿಕಾನೀರ ಪೊಲಿಟಿಕಲ್ ಏಜಂಟರು.
ಹರೋಟಿ ವ ಟೋಂಕ್ ಪೊಲಿಟಿಕಲ್ ಏಜಂಟರು.
ಭರತಪುರ ಮತ್ತು ಕರೋಲಿ ಪೊಲಿಟಿಕಲ್ ಏಜಂಟರು.
ಮೇವಾರ ರೆಸಿಡೆಂಟರು.

ಜೆ. ಜೊಸ್ಸರ್ಟ ಧೊರೆಗಳು ಸೆಂಟ್ರಲ್ ಇಂಡ್ಯದ ಬಗ್ಗೆ ಎಗ್ಸಿಬಿಷನ್ ಆಫೀಸರರಾಗಿರುವ ರೆಸಿಡೆನ್ಸಿ ಕಾಲೇಜಿನ ಪ್ರಿನ್ಸಿಪಾಲರು.

ಬರೋಡೆಯಲ್ಲಿರುವ ಗವರ್ನರ ಜನರಲ್‌ರವರ ಅಸಿಸ್ಟೆಂಟ್ ಏಜಂಟರು.

ಹೈದರಾಬಾದು, ಮೈಸೂರು, ಕೊಡಗು.

ಹೈದರಾಬಾದನಲ್ಲಿ ~~ಹೈದರಾಬಾದ ಕಾಂಟಿಂಜೆಂಟಿನ ಕೆವಲರಿ ಕಮಾಂಡಿಂಗ್ ಆಫೀಸರ ಕರ್ನ~~ಲ್, ಸಿ. ಜೆ. ಬಿ. ಫಿಟ್ಸ್‌ಜೆರಾಲ್ಡ
ಬೆಂಗಳೂರಿನಲ್ಲಿರುವ, ಮೈಸೂರು ಕನ್ಸಲ್ಟಿಂಗ್ ಇಂಜನಿಯರು ಲೆಫ್ಟನೆಂಟ್ ಕರ್ನಲ್ ಏ. ಲಿಮೊಸ್ಯೂರಿಯರ್.
ಕೊಡಗು ಸೀಮೆಯ ಚೀಫ್ ಕಮಿಷನರು.

ಕಟಮಂಡದಲ್ಲಿ ಇರುವ ನೇಪಾಳದ ಅಫಿಷಿಯೇಟಿಂಗ್ ರೆಸಿಡೆಂಟರು.

ಕಟಮಂಡದಲ್ಲಿರುವ ನೇಪಾಳದ ರೆಸಿಡೆನ್ಸಿ ಸರ್ಜನರು.

ಕಾಶ್ಮೀರದಲ್ಲಿ ಸ್ಪೆಷಿಯಲ್ ಡ್ಯೂಟಿ ಮೇಲೆ ಇರುವ ಆಫೀಸರು.

ರವಿನ್ಯೂ ವ ವ್ಯವಸಾಯ ಇಲಾಖೆಯಲ್ಲಿ ಸ್ಪೆಷಿಯಲ್ ಡ್ಯೂಟಿಯಲ್ಲಿ ಇರುವ ಡಾಕ್ಟರ್ ಜಿ. ವಾಟ

ರವಿನ್ಯೂ ವ ವ್ಯವಸಾಯ ಆಫೀಸಿನ ಎಗ್ಸಿಬಿಷನ್ ಇಲಾಖೆಯ ಬಾಬೂ ಟಿ. ಎಸ್. ಮುಕರಜಿ.

Mysore Government Press, Bangalore.—1885.